# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 351 |
| ಸದಸ್ಯರ ಹೆಸರು | : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 18.07.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ 3ನೇ ಹಂತದ ಭೂ–ಸ್ವಾಧೀನ (ಎಫ್.ಆರ್.ಎಲ್–524.256) ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರ ಎಷ್ಟು; ಈಗಾಗಲೇ ಭೂಸ್ವಾಧೀನಪಡಿಸಿಕೊಂಡಿರುವ ಕ್ಷೇತ್ರಕ್ಕೆ ಎಕರೆಗೆ ಎಷ್ಟು ಭೂ–ಪರಿಹಾರವನ್ನು ಸಂತ್ರಸ್ಥರಿಗೆ ನೀಡಲಾಗಿದೆ; ನೀಡಬೇಕಾದ ಭೂ–ಪರಿಹಾರ ಒಟ್ಟು ಕ್ಷೇತ್ರ ಮತ್ತು ಮೊತ್ತ ಎಷ್ಟು; ಬಾಕಿ ಉಳಿಸಿಕೊಂಡಿರುವ ಭೂ–ಪರಿಹಾರವನ್ನು ಸಂತ್ರಸ್ಥರಿಗೆ ಯಾವ ಕಾಲಮಿತಿಯೊಳಗೆ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಎಫ್.ಆರ್.ಎಲ್. 519.60 ಮೀ. ನಿಂದ 524.256 ಮೀ. ರವರೆಗೆ ಎತ್ತರಿಸಿದಾಗ, ಅಂದಾಜು ಒಟ್ಟಾರೆ 1,33,867 ಎಕರೆ ಜಮೀನನ್ನು ಭೂಸ್ವಾಧೀನಕ್ಕೆ ಒಳಪಡಿಸಬೇಕಾಗಿರುತ್ತದೆ. ಇಲ್ಲಿಯವರೆಗೆ 28,878ಎಕರೆ ಜಮೀನು ಕ್ಷೇತ್ರವನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ವಿವರಗಳು ಈ ಕೆಳಗಿನಂತಿವೆ :
<table>
<tr><th>ವಿವರಗಳು</th><th>ಒಟ್ಟು ಅವಶ್ಯವಿರುವ ಜಮೀನು ಕ್ಷೇತ್ರ</th><th>ಭೂಸ್ವಾಧೀನ ಪಡಿಸಿಕೊಂಡ ಕ್ಷೇತ್ರ</th></tr>
<tr><td colspan="3">ಜಮೀನುಗಳ ಸ್ವಾಧೀನ</td></tr>
<tr><td>ಮುಳುಗಡೆ ಜಮೀನು</td><td>75,563</td><td>2,543</td></tr>
<tr><td>ಪುನರ್ವಸತಿ ಕೇಂದ್ರಗಳ ನಿರ್ಮಾಣಕ್ಕಾಗಿ (20 ಗ್ರಾಮಗಳು & ಬಿಟಿಡಿಎ)</td><td>6,467</td><td>3,393</td></tr>
<tr><td>ಕಾಲುವೆಗಳ ನಿರ್ಮಾಣಕ್ಕಾಗಿ</td><td>51,837</td><td>22,942</td></tr>
<tr><td>ಒಟ್ಟು</td><td>**1,33,867**</td><td>**28,878**</td></tr>
</table>
ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ರೂ.3048.35 ಕೋಟಿಗಳ ಪರಿಹಾರ ಪಾವತಿಸಲಾಗಿದೆ. ಇನ್ನೂ 937ಎ–34ಗುಂ. ಕ್ಷೇತ್ರಕ್ಕೆ ರೂ.111.73 ಕೋಟಿ ಭೂಪರಿಹಾರ ಮೊತ್ತವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನದಲ್ಲಿ ಆದ್ಯತೆಯ ಮೇರೆಗೆ ಪಾವತಿಸಲು ಕ್ರಮ ವಹಿಸಲಾಗುವುದು.</td></tr>
<tr><td>ಆ)</td><td>3ನೇ ಹಂತದ ಭೂ–ಸ್ವಾಧೀನ ಪ್ರಕ್ರಿಯೆಯನ್ನು ಎರಡು ಭಾಗಗಳಾಗಿ ವಿಂಗಡನೆ ಮಾಡಿ ಅಂದರೆ 519.60 ದಿಂದ 522 ಮೀ.ಗೆ ಮತ್ತು 522 ದಿಂದ 524.256 ಮೀ.ಗೆ ಸ್ವಾಧೀನಪಡಿಸಿಕೊಳ್ಳಲಾಗುತ್ತಿರುವುದು ನಿಜವೇ; ಇದ್ದಲ್ಲಿ, ಎರಡು ಹಂತದಲ್ಲಿ ಸ್ವಾಧೀನಪಡಿಸಿಕೊಳ್ಳುವ ಕುರಿತು ಸರ್ಕಾರದಿಂದ ಯಾವುದಾದರೂ ಆದೇಶವಿದ್ದಲ್ಲಿ, ಅದರ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು;</td><td>ದಿನಾಂಕ:12.08.2022 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಚಿವ ಸಂಪುಟದ ಉಪ ಸಮಿತಿ ಸಭೆಯ ತೀರ್ಮಾನದಂತೆ ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮದ 140ನೇ ನಿಗಮ ಮಂಡಳಿ ಸಭೆಯ ನಿರ್ದೇಶನದಂತೆ, ಮುಳುಗಡೆ ಜಮೀನನ್ನು ಏಕ ಕಾಲಕ್ಕೆ ಭೂಸ್ವಾಧೀನಕ್ಕೆ ಒಳಪಡಿಸುವ ಬದಲಾಗಿ ಒಟ್ಟಾರೆ ಮುಳುಗಡೆ ಕ್ಷೇತ್ರವನ್ನು (1) ಆರ್. ಎಲ್. 519.600 ರಿಂದ 522.00 ಮೀ. ವರೆಗೆ ಮುಳುಗಡೆ ಹೊಂದುವ ಜಮೀನು ಕ್ಷೇತ್ರ ಅಂದಾಜು 38,983 ಎಕರೆಯನ್ನು ಮತ್ತು (2) ಆರ್. ಎಲ್. 522.00 ರಿಂದ 524.256 ಮೀ. ವರೆಗೆ ಮುಳುಗಡೆ ಹೊಂದುವ ಜಮೀನು ಕ್ಷೇತ್ರ ಅಂದಾಜು 36,580 ಎಕರೆಯನ್ನು ಭೂಸ್ವಾಧೀನಕ್ಕೆ ಎರಡು ಹಂತದಲ್ಲಿ ಒಳಪಡಿಸುವುದು ಮತ್ತು ಸದರಿ ನಿರ್ಣಯದನ್ವಯ ಭೂಸ್ವಾಧೀನತೆ ಪ್ರಕ್ರಿಯೆ ಹಂತದಲ್ಲಿ ಒಂದುವೇಳೆ ರೈತರ ಜಮೀನು ಎಫ್.ಆರ್.ಎಲ್ ಗಳನ್ವಯ 2 ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಟ್ಟಲ್ಲಿ ಅಂತಹ ಜಮೀನಿನ ಕ್ಷೇತ್ರದ ಭೂಸ್ವಾಧೀನತೆಯನ್ನು ಒಟ್ಟಾರೆಯಾಗಿ ಒಂದೇ ಹಂತದಲ್ಲಿ ಕೈಗೊಳ್ಳುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</td></tr>
</table>

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಇ) | ಹಂತ-ಹಂತವಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದರಿಂದ ಆ ಭಾಗದ ಸಂತ್ರಸ್ಥ ರೈತರಿಗೆ ತೊಂದರೆ ಮತ್ತು ಭೂ-ಸ್ವಾಧೀನ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗುವುದಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಕ್ಕೆ ಹಂಚಿಕೆಯಾಗಿರುವ ನೀರಿನ ಬಳಕೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್ 519.60 ಮೀ. ನಿಂದ ಆರ್.ಎಲ್ 524.256 ಮೀ.ಗೆ (4.656 ಮೀ.) ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ಐತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆ ಆಗಬೇಕಾಗಿದೆ.<br><br>ಅನುದಾನ ಲಭ್ಯತೆ ಅನುಸಾರ ಆದ್ಯತೆಯ ಮೇರೆಗೆ ಹಂತ ಹಂತವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಜರುಗಿಸಲು ಕ್ರಮ ವಹಿಸಲಾಗುವುದು. |
| ಈ) | ಏಕ ಕಾಲದಲ್ಲಿ ಭೂ-ಸ್ವಾಧೀನಪಡಿಸಿಕೊಂಡು ಪರಿಹಾರ ಧನವನ್ನು ವಿತರಿಸಬೇಕೆನ್ನುವುದು ಆ ಭಾಗದ ಸಂತ್ರಸ್ಥ ರೈತರ ಬೇಡಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

ಸಂಖ್ಯೆ:ಜಸಂಇ 52 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು